ಇದು ಎಲ್ಲರಿಗೂ ಗೊತ್ತಿದೆ. ಸರ್ಕಾರಕ್ಕೆ ಗೊತ್ತಿಲ್ಲ ಎಂದರೆ ಹೇಗೆ ?

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಸದಸ್ಯರು ಕೇಳುತ್ತಾ ಇರುವುದು ಏನೆಂದರೆ ಈ ಕಾರ್ಮಿಕ ವರ್ಗಕ್ಕೆ ಬಹಳ ಅನ್ಯಾಯವಾಗುತ್ತಾ ಇದೆ, ಅವರ ಕನಿಷ್ಟ ಕೂಲಿ ಇತ್ಯಾದಿ ಬಗ್ಗೆ ಏನು ಬೇಡಿಕೆಗಳು ಇವೆಯೋ ಇದುವರೆಗೂ ಏನೂ ಈಡೇರಿಲ್ಲ. ಅದರಲ್ಲೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಮಿಕರು ಇರುವುದು ಜಾಸ್ತಿ ಹೀಗೆ ಹೆಚ್ಚು ಜನ ಕಾರ್ಮಿಕರು ಇರುವ ಕಡೆಯಲ್ಲಿ ತಾವು ಅಲ್ಲಿಗೆ ಅವಶ್ಯಕವಾದ ಸಿಬ್ಬಂದಿ ಎಷ್ಟು ಬೇಕೋ ಅಷ್ಟನ್ನು ಕೊಟ್ಟು ಅಲ್ಲಿಯ ಸಿಬ್ಬಂದಿಯ ಕೊರತೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳಿದ್ದಾರೆ.

ಶ್ರೀ ಎಂ. ರಘುಪತಿ.— ನಾನು ಆಗಲೇ ಹೇಳಿದ್ದೇನೆ. ಅಲ್ಲಿಗೆ ಅವಶ್ಯಕವಾದ ಸಿಬ್ಬಂದಿ ಎಷ್ಟು ಬೇಕೋ ಅಷ್ಟನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದೇನೆ.

ಅಧ್ಯಕ್ಷರು.— ಪ್ರಶ್ನೋತ್ತರ ವೇಳೆ ಮುಗಿಯಿತು.

ಅಧ್ಯಕ್ಷರು.—(೧) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು (ವಿಶೇಷ ಪಟ್ಟಿ)

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಇಪ್ಪತ್ತೈದನೇ ಪಟ್ಟಿಯನ್ನು ಸಭೆಯ ಮುಂದೆ ಇಟ್ಟಿದ್ದೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತರಗಳ ಪಟ್ಟಿ

ಬೆಂಗಳೂರು ದಕ್ಷಿಣ ತಾಲ್ಲೂಕಿನ ಹರಿಜನರ ಸಂಖ್ಯೆ ಹಾಗೂ ಸಾಲ ಮತ್ತು ಸಹಾಯಧನಗಳ ಬಗ್ಗೆ

೨೩೦ (೧೫೯) ಶ್ರೀ ಎಸ್. ಸೂರ್ಯನಾರಾಯಣರಾವ್ (ಪರ್ತ್ತೂರು).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ದಯೆಯಿಟ್ಟು ತಿಳಿಸುವರೇ:—

ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿರುವ ಹರಿಜನರ ಒಟ್ಟು ಸಂಖ್ಯೆ ಎಷ್ಟು. ಮತ್ತು ಇದರಲ್ಲಿ ಬಡತನದ ರೇಖೆಯ ಅಡಿಯಲ್ಲಿರುವ ಕುಟುಂಬಗಳ ಸಂಖ್ಯೆಗಳೆಷ್ಟು?

ಆ) ಈ ಕುಟುಂಬಗಳಲ್ಲಿ ಸರ್ಕಾರದ ವಿವಿಧ ಯೋಜನೆಗಳಿಂದ (ಐಆರ್‌ಡಿಪಿ, ಡಿಆರ್‌ಪಿ, ವಿಶೇಷ ಘಟಕ ಯೋಜನೆ ಇತ್ಯಾದಿ) ಸಾಲ ಮತ್ತು ಸಹಾಯಧನ ಪಡೆದಿರುವ ಒಟ್ಟು ಕುಟುಂಬಗಳ ಸಂಖ್ಯೆ ಎಷ್ಟು?

ಇ) ಉಳಿದ ಕುಟುಂಬಗಳಿಗೆ ಸಾಲದ ಯೋಜನೆಯ ಬಗ್ಗೆ ಸರಕಾರದವರು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ?

ಈ) ಇಡೀ ದಕ್ಷಿಣ ತಾಲ್ಲೂಕಿನ ಎಲ್ಲಾ ಹರಿಜನರ ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲೆತ್ತಲು ಸರ್ಕಾರದವರಿಗೆ ಎಷ್ಟು ವರ್ಷ ಬೇಕಾಗುತ್ತದೆ?

ಶ್ರೀಮತಿ ಚಂದ್ರಪ್ರಭಾ ಅರಸ್.—(ಸಮಾಜಕಲ್ಯಾಣ ಹಾಗೂ ರೇಷ್ಮೆ ಖಾತೆ ಮಂತ್ರಿಗಳು).—

ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ ಹರಿಜನರ ಒಟ್ಟು ಸಂಖ್ಯೆ ೧೯೭೧ರ ಜನಗಣತಿಯ ಪ್ರಕಾರ ೪೯,೪೯೫. ಬಡತನದ ರೇಖೆಯ ಅಡಿಯಲ್ಲಿರುವ ಹರಿಜನ ಕುಟುಂಬಗಳ ಸಂಖ್ಯೆ ೮,೨೪೯.

ಆ) ದಕ್ಷಿಣ ತಾಲ್ಲೂಕಿನಲ್ಲಿ ಸರ್ಕಾರದ ವಿವಿಧ ಯೋಜನೆಗಳಿಂದ ಸೌಲಭ್ಯ ಪಡೆದ ಹರಿಜನ ಕುಟುಂಬಗಳ ಸಂಖ್ಯೆ ಈ ಕೆಳಕಂಡಂತಿದೆ:

೧)	ಐಆರ್‌ಡಿಪಿ	೧,೧೨೫
೨)	ವಿಶೇಷ ಘಟಕ ಯೋಜನೆ	೬೩
೩)	ಮನೆಗಳಿಗೆ ವಿದ್ಯುಚ್ಛಕ್ತಿ ಪೂರೈಕೆ	೨,೪೩೧
೪)	ಜಮೀನಿನ ಮಂಜೂರು	೩೬೭

ಇ) ವಿಶೇಷ ಘಟಕ ಯೋಜನೆಯಲ್ಲಿ ಬಡತನದ ರೇಖೆಯ ಅಡಿಯಲ್ಲಿರುವ ಅರ್ಧಭಾಗ ಕುಟುಂಬಗಳಿಗೆ ಆರನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಸಹಾಯ ಸೌಲಭ್ಯಗಳನ್ನು ನೀಡಿ, ಅವರನ್ನು ಬಡತನದ ರೇಖೆಯಿಂದ ಮೇಲೆ ತರುವ ಗುರಿ ಹೊಂದಲಾಗಿದೆ.

ಈ) ಉಳಿದ ಕುಟುಂಬಗಳನ್ನು ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡತನದ ರೇಖೆಯಿಂದ ಮೇಲೆತ್ತಲು ಪ್ರಯತ್ನಿಸಲಾಗುತ್ತೆ.

ಊದುಬತ್ತಿ ಕಾರ್ಖಾನೆ ಮತ್ತು ಉಡುಪು ಉದ್ಯಮಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಂಖ್ಯೆ ಬಗ್ಗೆ

೨೩೨ (೧೭೨) ಶ್ರೀ ಎಸ್. ಸೂರ್ಯನಾರಾಯಣರಾವ್ (ಪರ್ತೂರು).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಊದುಬತ್ತಿ ಕಾರ್ಖಾನೆಗಳಲ್ಲಿ ಮತ್ತು ಉಡುಪು ಉದ್ಯಮಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಂಖ್ಯೆ ಎಷ್ಟು?

ಆ) ಈ ಮಹಿಳೆಯರಿಗೆ ಕಾರ್ಖಾನೆಗಳ ಮಾಲೀಕರು ಹೆರಿಗೆ ಭತ್ಯ ಕೊಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ಸಂಬಂಧಪಟ್ಟ ನಿಯಮಗಳನ್ನು ಜಾರಿಗೆ ತರದಿರುವ ಕಾರ್ಖಾನೆಗಳ ಮಾಲೀಕರ ಮೇಲೆ ಕ್ರಮ ಜರುಗಿಸಿ ಸಂಬಂಧಪಟ್ಟ ಮಹಿಳಾ ಕಾರ್ಮಿಕರಿಗೆ ಸೆಪ್ಟೆಂಬರ್ ತಿಂಗಳೊಳಗಾಗಿ ಜಾರಿಗೆ ತರುವ ಭರವಸೆಯನ್ನು ಸರ್ಕಾರದವರು ಕೊಡುವರೇ?

ಶ್ರೀ ಎಂ. ರಘುಪತಿ (ಪ್ರಸಾರ, ವಾರ್ತಾ, ಪ್ರವಾಸೋದ್ಯಮ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ೧೦,೬೮೨

ಆ) ಯಾವುದೇ ದೂರು ಬಂದಿರುವುದಿಲ್ಲ.

ಇ) ಯಾವುದೇ ದೂರು ಬಂದಲ್ಲಿ ಕಾನೂನು ರೀತ್ಯ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಇಂತಹ ಯಾವುವೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ ಸಂಬಂಧಪಟ್ಟ ಆಡಳಿತ ವರ್ಗದ ಮೇಲೆ ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವುದಲ್ಲದೇ ಸೂಕ್ತ ಸಲಹೆಯನ್ನು ನೀಡಿ ಸದರಿ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಕಾರ್ಖಾನೆಗಳ ನಿಯಮ ಮತ್ತು ಪ್ರಸೂತಿ ಸೌಕರ್ಯದ ನಿಯಮದಂತೆ ಸೌಲಭ್ಯವನ್ನು ಒದಗಿಸಲಾಗುವುದು.

ಕಾರ್ಖಾನೆಗಳಲ್ಲಿ ಸಂಭವಿಸಿರುವ ಅಪಘಾತಗಳ ಬಗ್ಗೆ

೨೩೦ (೧೭೩) ಶ್ರೀ ಎಸ್. ಸೂರ್ಯನಾರಾಯಣರಾವ್ (ಪರ್ತೂರು).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ೧೯೮೧-೮೨ರಿಂದ ೮೨-೮೩, ೮೩-೮೪ರ ಈ ತಹಲ್‌ವರೆಗೆ ವಿವಿಧ ಕಾರ್ಖಾನೆಗಳಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ ಎಷ್ಟು? ಮತ್ತು ಇವುಗಳಲ್ಲಿ ಸರ್ಕಾರ ಕಾರ್ಖಾನೆಗಳಲ್ಲಿ ಮತ್ತು ಖಾಸಗಿ ಕಾರ್ಖಾನೆಗಳಲ್ಲಿ ಸಂಭವಿಸಿದ ಅಪಘಾತಗಳ ಸಂಖ್ಯೆ ಎಷ್ಟು ?

ಆ) ಈ ಅಪಘಾತಗಳಿಗೆ ಕಾರಣಗಳೇನು ಎಂಬುದನ್ನು ತಿಳಿಯಲು ಸರ್ಕಾರದವರು ತನಿಖೆಗಳನ್ನು ನಡೆಸಿದ್ದಾರೆಯೇ ಮತ್ತು ಇವುಗಳಲ್ಲಿ ಜವಾಬ್ದಾರಿ ಯಾರದು ಎಂಬುದನ್ನು ಖಚಿತಪಡಿಸಲಾಗಿದೆಯೇ ?